# ಆಹಾ ಸುದ್ದಿ!

★ ಸಸಿತೋಟ



ಹಾವುಗಳ ಮಸಾಜ್ ಹಲವು ಕಡೆ ಸ್ಪಾಗಳಲ್ಲಿ ಜನಪ್ರಿಯವಾಗುತ್ತಿದೆ. ಆದರೆ ಫಿಲಿಪ್ಪೀನ್ಸ್‌ನ ಸೆಬು ಮೃಗಾಲಯದಲ್ಲಿ ಈ ದೈತ್ಯ ಸರೀಸೃಪಗಳಿಂದ ಮಸಾಜ್ ಉಚಿತವಂತೆ. ತಲಾ 16 ಅಡಿಗಳಷ್ಟು ಉದ್ದದ ನಾಲ್ಕೈದು ಬರ್ಮಾ ಹೆಬ್ಬಾವುಗಳು ಮೈಮೇಲೆ ಸರಿದಾಡುತ್ತಿದ್ದರೆ ಮಸಾಜ್ ಆಗುವುದು ಹೋಗಲಿ, ಎಲುಬುಗಳೆಲ್ಲಾ ಲಟಲಟ ಮುರಿಯುವುದು ಗ್ಯಾರಂಟಿ. ಮಸಾಜ್ ಮಾಡಿ ಮಾಡಿ ಮಧ್ಯದಲ್ಲಿ ಹೆಬ್ಬಾವಿಗೆ ಹಸಿವಾದರೆ... ಮಸಾಜ್‌ಗೆ ಇಳಿಸುವ ಮುನ್ನವೇ 10-12 ಕೋಳಿಗಳನ್ನು ತಿನ್ನಿಸುತ್ತಾರಂತೆ.

ನ್ಯೂಯಾರ್ಕ್ ಪೋಸ್ಟ್ ವರದಿಗಾರ್ತಿ ಸ್ಟಿಫಾನಿ ಎರಡು ವರ್ಷಗಳ ಹಿಂದೆ ತನ್ನ ಗೆಳೆಯ ಎರಿಕ್‌ನಿಗೆ ಸ್ಯಾಂಡ್‌ವಿಚ್ ಮಾಡಿಕೊಟ್ಟಳಂತೆ. 'ನಿಶ್ಚಿತಾರ್ಥ ಉಂಗುರಕ್ಕೆ 300 ಸ್ಯಾಂಡ್‌ವಿಚ್‌ಗಳು ಬಾಕಿ ಇವೆ' ಎಂದಿದ್ದನಂತೆ ರುಚಿಗೆ ಮನಸೋತ ಎರಿಕ್. '300 ಸ್ಯಾಂಡ್‌ವಿಚ್' ಎಂಬ ಬ್ಲಾಗ್ ಶುರು ಮಾಡಿದ ಸ್ಟಿಫಾನಿ 257ಕ್ಕೇ ಎರಿಕ್ ಔಟಾಗಿ ಉಂಗುರ ತೊಡಿಸಿದ್ದಾನೆ ಎಂದು ಬರೆದುಕೊಂಡಿದ್ದಾಳಂತೆ. ಬಾಕಿ 43 ಸ್ಯಾಂಡ್‌ವಿಚ್‌ಗೇನೂ ಮೋಸವಿಲ್ಲ ಎಂದಿದ್ದಾಳೆ ಆಕೆ. ರುಚಿ ಹೆಚ್ಚು ಕಡಿಮೆ ಆಗಿ ಉಂಗುರ ಬೆರಳಿನಿಂದ ಜಾರಿದರೆ...!




ಕ್ರಯೋಷಿಯಾದ ಲೋಕ್ವೆ ಎಂಬಲ್ಲಿ ಪ್ರತಿ ವರ್ಷ 'ಕಪ್ಪೆ ರಾತ್ರಿ' ನಡೆಯುತ್ತದೆ. ಕಪ್ಪೆಯನ್ನು ಮುಟ್ಟದೆ ಅದು ಮುಂದಕ್ಕೆ ಜಿಗಿಯುವಂತೆ ಮಾಡಿ ಗೆಲ್ಲಿಸುವ ಸ್ಪರ್ಧೆ. ಜೊತೆಗೆ ಸಂಗೀತ, ನೃತ್ಯ, ಮದ್ಯ, ಕಪ್ಪೆ ಕಾಲುಗಳ ಖಾದ್ಯ. ರಂಗಿನ ಬೆಳಕಲ್ಲಿ ಜಿಗಿದಾಡಿದ ಕಪ್ಪೆ ಕೊನೆಗೆ ಸೇರುವುದು ತನ್ನ ಮಾಲೀಕನ ಪ್ಲೇಟನ್ನೇ.

ತನಗೆ ಮೋಸ ಮಾಡಿ ಕಂಡ ಕಂಡ ಹೆಂಗಳೆಯರೊಂದಿಗೆ ತಿರುಗಾಡುತ್ತಿದ್ದ ಗಂಡನ ಪೋಸ್ಟರ್‌ಗಳನ್ನು ಇಂಗ್ಲೆಂಡ್‌ನ ಪ್ರೆಸ್ಟ್‌ವಿಚ್‌ನಲ್ಲಿ ಆತನ ಪತ್ನಿ ಎಲ್ಲೆಡೆ ಹಚ್ಚಿದ್ದಾಳಂತೆ. ಪತಿಯ ಫೋಟೊ, ಫೋನ್ ನಂಬರ್, ಹುಟ್ಟಿದ ದಿನಾಂಕದ ಜೊತೆ ಮದುವೆಯಾಗಿ ಇಬ್ಬರು ಮಕ್ಕಳ ತಂದೆ ಎಂಬ ಎಚ್ಚರಿಕೆಯನ್ನೂ ಇತರ ಹೆಂಗಳೆಯರಿಗೆ ನೀಡಿದ್ದಾಳಂತೆ. ಎಲ್ಲಾ ಹೆಂಗಳೆಯರು ಇದನ್ನೇ ಮಾಡಹೊರಟರೆ ಊರ ತುಂಬಾ ಪೋಸ್ಟರ್‌ಗಳೇ!

ಇಂಗ್ಲೆಂಡ್‌ನಲ್ಲಿ ಇತ್ತೀಚೆಗೆ ಇಂಗ್ಲೆಂಡ್ ಮತ್ತು ವೇಲ್ಸ್ ಕ್ರಿಕೆಟ್ ಮಂಡಳಿ ನ್ಯಾಟ್‌ವೆಸ್ಟ್ ಟಿ20 ಬ್ಲಾಸ್ಟ್ ಪಂದ್ಯಾವಳಿಗೆ ಮುನ್ನ ಬಾಹ್ಯಾಕಾಶಕ್ಕೆ ಕಳಿಸಿದ ಕ್ರಿಕೆಟ್ ಚೆಂಡಿದು. ಬಾಹ್ಯಾಕಾಶ ಎಂಜಿನಿಯರ್‌ಗಳು ಈ ವಿಶೇಷ ಚೆಂಡನ್ನು ಆಕಾಶದಲ್ಲಿ 1,10,000 ಅಡಿಗಳಷ್ಟು ಎತ್ತರಕ್ಕೆ ಚಿಮ್ಮಿಸಿದರಂತೆ. ಭಾರತೀಯ ಕ್ರಿಕೆಟ್ ಮಂಡಳಿಯೇನೂ ಕಡಿಮೆಯಿಲ್ಲ, ಭ್ರಷ್ಟಾಚಾರವನ್ನು ಇನ್ನೂ ಎತ್ತರಕ್ಕೆ ಅಂದರೆ ಬಾಹ್ಯಾಕಾಶ ದಾಟಿ ಚಂದ್ರನತ್ತ ಚಿಮ್ಮಿಸಿದೆ.



ಪ್ಯಾರಿಸ್‌ನಲ್ಲಿ 'ಕೆಸರಾಟದ ದಿನ'ವೂ ಇದೆ. ಒಬ್ಬರಿಗೊಬ್ಬರು ಕೆಸರಿನ ನೀರನ್ನು ಎರಚಿಕೊಳ್ಳುವುದಲ್ಲದೇ ಕೆಸರಿನೋಟ, ಕೆಸರಿನಾಟ ಎಂದು ಸ್ಪರ್ಧೆಗಳೂ ಇವೆಯಂತೆ. ಅದೇನು ಮಹಾ, ಬೆಂಗಳೂರಿನಲ್ಲಿ ಮಳೆ ಬಂದ ದಿನ, ಮರುದಿನವೆಲ್ಲಾ ಕೆಸರಿನ ದಿನವೇ.

